ಸರ್ಕಾರಿ ಹಾಗೂ ಗ್ರಾಮೀಣ ಜಮಾನನ್ನು ಗುರುತಿಸಲಾಗಿದೆ. ನಿವೇಶನಗಳನ್ನಾಗಿ ರೂಪಿಸಲು ಸದರಿ ಜಮಾನನ್ನು ಜಿಲ್ಲಾ ಪಂಚಾಯಿತಿ ಸ್ವಾಧೀನಕ್ಕೆ ವಹಿಸಲಾಗಿದೆ. ನಿವೇಶನಗಳನ್ನುರೂಪಿಸುವ ಕಾರ್ಯ 114 ಗ್ರಾಮಗಳಲ್ಲಿ ಪ್ರಗತಿಯಲ್ಲಿದೆ. 4 ಗ್ರಾಮಗಳಲ್ಲಿ ಜಮಾನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಉಳಿದ 110 ಗ್ರಾಮಗಳಲ್ಲಿ ಭೂ ಸ್ವಾಧೀನಕ್ಕೆ ಕ್ರಮಕೈಗೊಳ್ಳಬೇಕಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ
(ವಸತಿ ಸಚಿವರು)

ವಿಷಯ: ಕೊಳಚೆ ನಿರ್ಮೂಲನ ಮಂಡಳಿಯಿಂದ ಸಮೀಕ್ಷೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 9 (84)

ಶ್ರೀ ಎಸ್. ಡಿ. ಮುದ್ದು ಹನುಮೇಗೌಡ (ಕುಣಿಗಲ್)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಯಾವುದಾದರೂ ಸಮೀಕ್ಷೆಯನ್ನು ನಡೆಸಲಾಗಿದೆಯೇ ? : ಹೌದು

ಆ) ಹಾಗಿದ್ದಲ್ಲಿ ಕರ್ನಾಟಕದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಮತ್ತು ಅದರಲ್ಲೂ ಕುಣಿಗಲ್ ಕ್ಷೇತ್ರದಲ್ಲಿರುವ ಸಂಖ್ಯೆ ಎಷ್ಟು ? : ಕರ್ನಾಟಕ ರಾಜ್ಯದಲ್ಲಿ 1871 ಗುರುತಿಸಿರುವ ಕೊಳಚೆ ಪ್ರದೇಶಗಳಿರುತ್ತವೆ. ಪೈಕಿ ಕುಣಿಗಲ್ ಪಟ್ಟಣದಲ್ಲಿ 7 ಗುರುತಿಸಿರುವ ಕೊಳಚೆ ಪ್ರದೇಶಗಳಿರುತ್ತವೆ. ಕೊಳಚೆ ನಿರ್ಮೂಲನಾ ಮಂಡಳಿಯು ಕರ್ನಾಟಕ ರಾಜ್ಯದಲ್ಲಿನ 1871 ಗುರುತಿಸಿದ ಕೊಳಚೆ ಪ್ರದೇಶಗಳ ಪೈಕಿ 1242 ಕೊಳಚೆ ಪ್ರದೇಶಗಳನ್ನು ಮತ್ತು ಕುಣಿಗಲ್ ಪಟ್ಟಣದಲ್ಲಿರುವ 7 ಕೊಳಚೆ ಪ್ರದೇಶಗಳ ಪೈಕಿ 4 ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶದ ಕಾಯಿದೆಯಂತೆ ಘೋಷಿಸಿದೆ. ಘೋಷಿತ ಕೊಳಚೆ ಪ್ರದೇಶಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ .
(ವಸತಿ ಸಚಿವರು)

ವಿಷಯ: ಕುಣಿಗಲ್ ತಾಲ್ಲೂಕು ರಂಗಸ್ವಾಮಿ ಗುಡ್ಡದಲ್ಲಿರುವ ಪರಿಶಿಷ್ಟ ಜಾತಿ ಸಹಕಾರ ಸಂಘ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 10 (86)

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ವ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕುಣಿಗಲ್ ತಾಲ್ಲೂಕು ರಂಗಸ್ವಾಮಿ ಗುಡ್ಡದಲ್ಲಿ ಅಖಿಲ ಭಾರತ ಪರಿಶಿಷ್ಟ ಜಾತಿ ಸಹಕಾರ ಸಂಘದ ಯೋಜನೆಗೆ ಖರ್ಚು ಮಾಡಿದ ಹಣವೆಷ್ಟು ? : ಸರ್ಕಾರದ ವತಿಯಿಂದ ಅಖಿಲ ಭಾರತಪರಿಶಿಷ್ಟ ಜಾತಿ ಸಹಕಾರ ಸಂಘದ ಯೋಜನೆ ಯಾವುದೇ ಹಣವನ್ನು ಸರ್ಕಾರದ ವತಿಯಿಂದ ಖರ್ಚು ಮಾಡಿರುವುದಿಲ್ಲ.

ಆ) ಈ ಯೋಜನೆಯನ್ನು ಕೈ ಬಿಡಲು ಕಾರಣವೇನು ? : ಸರ್ಕಾರವು ತೋಟಗಾರಿಕೆ ಇಲಾಖೆಗೆ ಸೇರಿದ ರಂಗಸ್ವಾಮಿಗುಡ್ಡದ ತೋಟಗಾರಿಕೆ ಕ್ಷೇತ್ರದಲ್ಲಿ 500 ಎಕರೆ ಜಮೀನನ್ನು ನಿರ್ಭಂದಿತ

ಗುತ್ತಿಗೆ ಆಧಾರದ ಮೇಲೆ ಸದರಿ ಸಂಸ್ಥೆಗೆ ದಿನಾಂಕ 9.9. 1987 ರಂದು ನೀಡಲಾಗಿತ್ತು. ಸರ್ಕಾರದಿಂದ ಮಂಜೂರಾದ ಜಮೀನನ್ನು ನಿಗಧಿತ ಕೆಲಸಕ್ಕೆ ಉಪಯೋಗಿಸಿಕೊಳ್ಳದ ಕಾರಣ ಅಸ್ಕಾಸ್ ಸಂಸ್ಥೆಯಿಂದ ಪೂರ್ವಸ್ಥಿತಿಯಂತೆ ತೋಟಗಾರಿಕೆ ಇಲಾಖೆ ವಾಪಸ್ ಪಡೆದಿದೆ.

ಇ) ಈ ಯೋಜನೆಯ ವೈಫಲ್ಯತೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ಕೈಗೊಂಡ ಕ್ರಮವೇನು ? : ಸರ್ಕಾರದ ಯಾವುದೇ ನೌಕರರು ಯೋಜನೆಯ ವಿಫಲತೆಗೆ ಕಾರಣರಲ್ಲ. ಆದ್ದರಿಂದ ಇವರ ವಿರುದ್ಧ ಯಾವುದೇಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಡಿ. ಟಿ. ಜಯಕುಮಾರ್
(ತೋಟಗಾರಿಕೆ ರಾಜ್ಯ ಸಚಿವರು)

ವಿಷಯ: ಸಹಕಾರ ಸಂಘಗಳಿಗೆ ಹಾಗೂ ಗೃಹ ನಿರ್ಮಾಣ ಸಂಘಗಳಿಗೆ ಚುನಾವಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 11 (182)

ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿರುವ ವಿವಿಧ ಸಹಕಾರ ಸಂಘಗಳ ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದೂಡಿರುವುದು ನಿಜವೇ ? : ಹೌದು

2. ಹಾಗಿದ್ದಲ್ಲಿ ಕಾರಣಗಳೇನು ? : ಕರ್ನಾಟಕ ರಾಜ್ಯದಲ್ಲಿ - ಲೋಕಸಭಾ ಚುನಾವಣೆಯ ಪ್ರಕ್ರಿಯೆ ಪ್ರಾರಂಭವಾಗಿದ್ದರಿಂದ ಸರ್ಕಾರವು ಎಲ್ಲಾ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ ಮತ್ತು ಚುನಾವರ್ಣಗಳನ್ನು ದಿನಾಂಕ : 31.05. 1996 ರವರೆಗೆ ಮುಂದೂಡಿ, ಎಲ್ಲಾ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ ಮತ್ತು ಚುನಾವಣೆಗಳನ್ನು ದಿನಾಂಕ : 30.06. 1996 ರೊಳಗೆ ನಡೆಸಲು ಆದೇಶಿಸಲಾಗಿದೆ.

3) ಸರ್ಕಾರವು ಇಂತಹ ಸಹಕಾರ ಸಂಘಗಳ ಚುನಾವಣೆಗಳನ್ನು ತಕ್ಷಣ ನಡೆಸಲು ಉದ್ದೇಶಿಸಿದೆಯೇ ? : ಸರ್ಕಾರವು ಎಲ್ಲಾ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆ ಮತ್ತು ಚುನಾವಣೆಗಳನ್ನು ದಿನಾಂಕ: 30.06. 1996 ರೊಳಗೆ ನಡೆಸಲು ಆದೇಶಿಸಿದೆ.

ಶ್ರೀ ಎಸ್. ಎಸ್. ಪಾಟೀಲ್
(ಸಹಕಾರ ಸಚಿವರು)

ವಿಷಯ: ವೃದ್ಧಾಪ್ಯ ವೇತನ ನೀಡುವಲ್ಲಿ ವಿಳಂಬ

ಚುಕ್ಕೆ ಗುರುತಿನ ಪ್ರಶ್ನೆ 12 (180)

ಶ್ರೀಮತಿ ಪ್ರಮೀಳ ನೇಸರ್ಗಿ (ಚಾಮರಾಜಪೇಟೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಎ) ವೃದ್ಧಾಪ್ಯ ವೇತನ ಪಡೆಯುತ್ತಿರುವ ಫಲಾನುಭವಿಗಳು ಸಕಾಲದಲ್ಲಿ ವೃದ್ಧಾಪ್ಯ ವೇತನ ಪಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : ಇಲ್ಲ.

ಬಿ) ಹಾಗಿದ್ದಲ್ಲಿ, ಅಂತಹ ವಿಳಂಬಕ್ಕೆ ಕಾರಣಗಳನ್ನು ಗುರುತಿಸಲಾಗಿದೆಯೇ, ಮತ್ತು ಹಾಗಿದ್ದಲ್ಲಿ ವೃದ್ಧಪ್ಯ ವೇತನವನ್ನು ಅರ್ಹ ಫಲಾನುಭವಿಗಳಿಗೆ ಪಾವತಿಸುವಲ್ಲಿ ವಿಳಂಬಕ್ಕೆ ಕಾರಣರಾದವರ